**ಓ ಎಸ್ ನಂ.254/2017**
**ಪಿ ಡಬ್ಲ್ಯೂ: 1**

**ದಿಃ 15.10.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಸಿ.ಬಿ. ವಕೀಲರಿಂದಃ**

ನನ್ನ ತಂದೆ ರಾಮಪ್ಪ ನಾನು ಹುಟ್ಟುವ ಮೊದಲೆ ತೀರಿಕೊಂಡಿಂದ್ದರು. 2 ನೇ ವಾದಿ ಆರೋಗ್ಯದಿಂದ ಇದ್ದಾರೆ . ನನ್ನ ಅಕ್ಕ ತಂಗಿಯರೆಲ್ಲರು ಜೀವಂತ ಇದ್ದಾರೆ ಎಂದರೆ ಸರಿ . ನನ್ನ ಮದುವೆ 2012 ರಲ್ಲಿ ಆಗಿರುತ್ತದೆ. ನನ್ನ ಗಂಡನ ಹೆಸರು ಕೇಶವಪ್ಪ ಎಂದರೆ ಸರಿ . ಅವರು ವೃತ್ತಿಯಲ್ಲಿ ಶಿಕ್ಷಕರು ಎಂದರೆ ಸರಿ . ನಾನು ಅವರೊಂದಿಗೆ ಬಾಗೂರಲ್ಲಿವಾಸ ಇರುತ್ತೇನೆ ಎಂದರೆ ಸರಿ . ಪ್ರತಿವಾದಿ ನನ್ನ ತಂದೆಯ ತಮ್ಮ ಎಂದರೆ ಸರಿ . ನನ್ನ ತಾಯಿ ನಾನು ವಿಶ್ವಾಸ ದಿಂದ ಇದ್ದೇವೆ ಎಂದರೆ ಸರಿ. 2003 ರಲ್ಲಿ ನಮ್ಮ ಕುಟುಂಬದ ಆಸ್ತಿಗಳನ್ನು ನನ್ನಅಜ್ಜಿ ರಂಗಮ್ಮ ನನ್ನ ತಾಯಿ ಚೌಡಮ್ಮ ಮತ್ತು ಪ್ರತಿವಾದಿ ಗ್ರಾಮದ ಹಿರಿಯರ ಸಮಕ್ಷಮ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ . ನಾನು ಮದುವೆ ಆದಾಗಿನಿಂದಲೂ ನನ್ನ ಗಂಡನ ಮನೆಯಲ್ಲಿ ವಾಸ ವಾಗಿದ್ದೆನೆ ಎಂದರೆ ಸರಿ . ನನ್ನ ಹಾಗೂ ನನ್ನ ಅಕ್ಕಂದಿರ ಮದುವೆಯನ್ನು ನನ್ನ ಚಿಕ್ಕಪ್ಪ ಜವಬ್ದಾರಿ ತೆಗೆದು ಕೊಂಡು ಮಾಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಸಾಲ ವಗೈರ ಮಾಡಿ ನನ್ನ ಮತ್ತು ನನ್ನ ಅಕ್ಕಂದಿರ ಮದುವೆ ಮಾಡಿರುತಾರೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಈ ನ್ಯಾಯಾಲಯದಲ್ಲಿ ಅಸಲು ದಾವೆ 95/2003 ನ್ನು ದಾಖಲಿಸಿದ್ದೆ ಎಂದರೆ ಸರಿ . ಸದರಿ ದಾವೆಯಲ್ಲಿ ಪ್ರತಿವಾದಿ ಮತ್ತು ನನ್ನ ಅಜ್ಜಿ ತಕರಾರು ಹಾಕಿದ್ದರು ಎಂದರೆ ಸರಿ . ಸದರಿ ದಾವೆಯನ್ನು ಈ ದಾವೆಯ ಆಸ್ತಿಯನ್ನು ಸೇರಿಸಿ ಉಳಿದೆಲ್ಲಾ ಆಸ್ತಿಗಳಲ್ಲಿ ಪಾಲುವಿಭಾಗ ಕೇಳಿ ದಾಖಲಿಸಿದ್ದೆ ಎಂದರೆ ಸರಿ . ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ದ ಹೊಳಲ್ಕೆರೆ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ . ಸದರಿ ಮೇಲ್ಮನವಿ ದಿ.05.03.2010 ರಂ ದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯ ಆದೇಶವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಆ ಕುರಿತು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ.

ದಾವಾ ಸ್ವತ್ತು ನನ್ನ ಚಿಕ್ಕಪ್ಪನಿಗೆ ಸೇರಿದ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿ ಭಾಗಕ್ಕೆ ಬಂದ ಸ್ವತ್ತು ಎಂದರೆ ಸರಿಯಲ್ಲ. ನನ್ನ ತಾಯಿ ದಾವಾ ಆಸ್ತಿ ಸರ್ವೇ ನಂ. ನಲ್ಲಿ ನಮ್ಮ ಹಿಸ್ಸೆಗೆ ಬಂದ ಜಮೀನನ್ನು ಟಿ.ಮಲ್ಲಪ್ಪ ಎಂಬುವವರಿಗೆ ಪ್ರತಿವಾದಿ ಮೂಲಕ ಮಾರಾಟ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ 2 ನೇ ವಾದಿಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. 2 ನೇ ವಾದಿ

ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರ ಬರುತ್ತದೆ ಎಂದು ನಾನೇ ನ್ಯಾಯಾಲಯಕ್ಕೆ ಹಾಜರಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕಂದಿರಿಗೆ ಈ ದಾವೆಯ ಕುರಿತು ತಿಳಿಸಿರುತ್ತೇನೆ. ನಾನು ಮತ್ತು ನಮ್ಮ ಅಕ್ಕಂದಿರು ನಮ್ಮ ತಂದೆ ತಾಯಿ ಆಸ್ತಿಗಳ ವಿಚಾರವಾಗಿ ವಿಭಾಗ ಮಾಡಿಕೊಂಡಿಲ್ಲ. ನನ್ನ ಅಕ್ಕಂದಿರನ್ನು ಈ ದಾವೆಯಲ್ಲಿ ಪಕ್ಷ ಗಾರರನ್ನಾಗಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ನನ್ನ ಅಕ್ಕಂದಿರು ನನಗೆ ಈ ದಾವೆ ಸಲ್ಲಿಸಲು ಸಹಕಾರ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ತಿರಸ್ಕರಿಸಿದ್ದಾರೆ ಎಂದು ಅವರನ್ನು ಬಿಟ್ಟು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಅಸಲು ದಾವಾ 95/2003 ರಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಮತ್ತು ಯಾವ ದಾಖಲೆಗಳನ್ನು ಹಾಜರುಪಡಿಸಿದ್ದರು ಎಂದು ಗೊತ್ತಿರುತ್ತದೆ. ಈ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ನನ್ನ ಗಂಡನ ಮಾತು ಕೇಳಿ ನನ್ನ ಚಿಕ್ಕ ಪ್ಪನಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ರಂಗಮ್ಮ ಈಗ ಜೀವಂತ ಇಲ್ಲ ಎಂದರೆ ಸರಿ . ಅವರು ಜೀವಂತ ಇರುವವರೆಗೂ ನನ್ನ ಚಿಕ್ಕಪ್ಪ ನೊಂದಿಗೆ ವಾಸ ಇದ್ದರು ಎಂದರೆ ಸರಿ . ಅವರ ಮರಣಾನಂತರ ಅವರ ಕ್ರಿಯಾ ಕರ್ಮಗಳನ್ನು ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಸರಿ . ದಾವಾ ಆಸ್ತಿಗೆ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ *ಬೆರಳಚ್ಚು* ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .